# ಪ್ಲಾಸ್ಟಿಕ್ ಮತ್ತು ಪರ್ಯಾಯಗಳ ಯಶೋಗಾಥೆ

**1**

ಪ್ಲಾಸ್ಟಿಕ್ ಮುಕ್ತ ಭಾರತದ ಕನಸನ್ನು ನಿಜವಾಗಿಸಲು ಶ್ರಮಿಸುತ್ತಿರುವ ಅಹಮದಾಬಾದ್ ಮೂಲದ ಸ್ಟಾರ್ಟ್‌ಅಪ್ 'ಎಕೋರೈಟ್'. ಐಐಟಿ ಪದವೀಧರರಾದ ಸಂಜೀವ್ ಸೂದ್ ಎಂ.ಬಿ.ಎ ಓದಿರುವ ತಮ್ಮ ಮಗನ ಜೊತೆಗೂಡಿ 2017ರಲ್ಲಿ ಸ್ಥಾಪಿಸಿದ ಈ ಸಂಸ್ಥೆ ಇದುವರೆಗೆ ಎರಡು ಲಕ್ಷ ಪರಿಸರಸ್ನೇಹಿ ಕೈಚೀಲಗಳನ್ನು ತಯಾರಿಸಿ ಅಮೆಜಾನ್ ಮಾರಾಟ ಜಾಲದ ಮೂಲಕ ಲಕ್ಷಾಂತರ ಗ್ರಾಹಕರಿಗೆ ತಲುಪಿಸಿದೆ. ಮೆಕ್ಕೆ ಜೋಳದ ಹೊಟ್ಟು, ಆಲೂಗಡ್ಡೆಯ ಸಿಪ್ಪೆ, ತಿರುಳು ಮತ್ತು ಬೀಟ್‌ರೂಟ್‌ನ ಎಲೆಗಳನ್ನು ಬಳಸಿ ತಯಾರಿಸಿದ ಕೈಚೀಲಗಳು ಅಮೆರಿಕ, ಯೂರೋಪ್ ದೇಶಗಳಿಗೂ ತಲುಪಿವೆ. ಐವತ್ತು ನೌಕರರನ್ನು ಹೊಂದಿರುವ ಎಕೋರೈಟ್ ಸಂಸ್ಥೆ, ಈ ವರ್ಷ, ಡಿಸ್ನಿ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಗ್ಲೋಬಲ್ ರೀ ಸೈಕ್ಲಿಂಗ್ ಸ್ಟಾಂಡರ್ಡ್ (GRS) ಸಂಸ್ಥೆಯು ಪ್ರಮಾಣೀಕರಿಸಿದ ಪ್ಲಾಸ್ಟಿಕ್ ತ್ಯಾಜ್ಯವನ್ನು ರೀ–ಸೈಕಲ್ ಮಾಡುವ ಯೋಜನೆ ಈಗಾಗಲೇ ಸಿದ್ಧಗೊಂಡಿದೆ. ಊಟದ ಡಬ್ಬಿ ಇಡುವ ಬ್ಯಾಗ್ ಮತ್ತು ಟೀ–ಶರ್ಟ್ ತಯಾರಿಕೆಯಲ್ಲಿ ತೊಡಗಿರುವ ಎಕೋರೈಟ್‌ನ ವಾರ್ಷಿಕ ವಹಿವಾಟು 2.5 ಕೋಟಿ ತಲುಪಿದೆ.

**2**

ಮುಂಬೈ ಮೂಲದ 'ಬೆಕೊ' ಕಂಪನಿಯು ಮೋಸೋ ಬಿದಿರಿನ ತಿರುಳು ಮತ್ತು ಮೆಕ್ಕೆ ಜೋಳದ ತಾಡನ್ನು ಮಿಶ್ರಣ ಮಾಡಿ ಅಡುಗೆ ಮನೆಯಲ್ಲಿ ಪಾತ್ರೆ ಹಿಡಿಯಲು, ಒರೆಸಲು ಬಳಸುವ ಟವೆಲ್‌ಗಳು, ಕಸ ಹಾಕಲು ಬಳಸುವ ಬ್ಯಾಗ್‌ಗಳು ಹಾಗೂ ಟಿಶ್ಯೂ ಪೇಪರ್‌ಗಳನ್ನು ತಯಾರಿಸಿ ಮಾರಾಟ ಮಾಡುತ್ತಿದೆ. ಇವರು ತಯಾರಿಸುವ ಬಿದಿರಿನ ಬ್ಯಾಗ್‌ಗಳು ಮುಂಬೈನ 5000 ಅಂಗಡಿಗಳಲ್ಲಿ ಮಾರಾಟಕ್ಕಿವೆ. ಪುನೀತ್ ಬಾತ್ರ ಮತ್ತು ಆದಿತ್ಯ ಈ ಕಂಪನಿಯ ಸ್ಥಾಪಕರು. ಬೆಕೊ ತನ್ನ ಮಾರಾಟ ಜಾಲವನ್ನು ಇತರ ರಾಜ್ಯಗಳಿಗೂ ವಿಸ್ತರಿಸಲು ಯೋಜಿಸಿದೆ. ಪುನೀತ್ ಹೇಳುವಂತೆ ಬೆಕೋ ಸಂಸ್ಥೆಯಿಂದ ಕಳೆದ ಎರಡು ವರ್ಷಗಳಲ್ಲಿ 120 ಟನ್ ಪ್ಲಾಸ್ಟಿಕ್ ಕಸ ಕಡಿಮೆಯಾಗಿದೆ.

**3**

ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನ ಸ್ಮಿತಾ ಕುಲಕರ್ಣಿ ಮತ್ತು ಮಾಲಿನಿ ಪರಮಾರ್ ಪ್ರಾರಂಭಿಸಿದ 'ಸ್ಟೋನ್ ಸೋಪ್' ಎಂಬ ಸ್ವಯಂ ಸೇವಾ ಸಂಸ್ಥೆ, ದೊಡ್ಡ ದೊಡ್ಡ ಮಾರಾಟ ಮಳಿಗೆಗಳಿಗೆ ಬಟ್ಟೆಯ ಚೀಲಗಳನ್ನು ನೀಡಿ, ಗ್ರಾಹಕರು ಆ ಬ್ಯಾಗ್‌ಗಳನ್ನು ಸಾಲ ಪಡೆಯುವಂತೆ ಪ್ರೇರೇಪಿಸಿತು. ಈ ಪ್ರಯತ್ನಕ್ಕೆ ಯಾರೂ ಸೊಪ್ಪು ಹಾಕಲಿಲ್ಲ. ಆಗ ಬಡಾವಣೆಯ ಕ್ರಿಯಾಶೀಲ ವೈದ್ಯೆ ಶಾಂತಿ ತಿರುಮಲಾ ನೇತೃತ್ವದ ಮಹಿಳೆಯರ ತಂಡ ಸೂಪರ್ ಮಾರ್ಕೆಟ್‌ಗಳ ಜಗುಲಿಯ ಮುಂದೆ ನಿಂತು ಪ್ಲಾಸ್ಟಿಕ್‌ನಿಂದಾಗುವ ಅನಾಹುತಗಳನ್ನು ವಿವರಿಸಿ, ಬಟ್ಟೆಯ ಬ್ಯಾಗ್ ಉಪಯೋಗಿಸುವುದರ ಮಹತ್ವವನ್ನೂ ಹೇಳತೊಡಗಿತು. ಅವರ ಪ್ರಯತ್ನದಿಂದ ಸ್ಥಳೀಯರು ಮನೆಯಿಂದ ಕೈಚೀಲ ತಂದು, ಪ್ಲಾಸ್ಟಿಕ್ ಚೀಲ ಬಳಕೆ ಕಡಿಮೆಮಾಡಿದ್ದಾರೆ.

**4**

ದಕ್ಷಿಣ ಕನ್ನಡ ಜಿಲ್ಲೆಯ ಪರ್ಲಂಪಾಡಿಯ ಕಿರಾಣಿ ಅಂಗಡಿ ಮಾಲೀಕ ಹರಿಪ್ರಸಾದ್ ಪ್ಲಾಸ್ಟಿಕ್ ಕಸ ವಿಲೇವಾರಿಯಲ್ಲಿ ಮಾದರಿಯಾಗಿದ್ದಾರೆ. ಎರಡು ವರ್ಷಗಳ ಹಿಂದೆ ಪ್ಲಾಸ್ಟಿಕ್ ಮಾಲಿನ್ಯದ ವಿರುದ್ಧ ಮೆರವಣಿಗೆ ಸಾಗಿ, ನಾಗರಿಕರಲ್ಲಿ ತಿಳಿವಳಿಕೆ ನೀಡಲು ಪ್ರಯತ್ನಿಸಿದ್ದ ಶಾಲಾ ಮಕ್ಕಳ ಪ್ರಯತ್ನದಿಂದ ಪ್ರಭಾವಿತರಾದ ಹರಿಪ್ರಸಾದ್, ತಮ್ಮ ಅಂಗಡಿಯಲ್ಲಿಯೇ ಬಳಕೆಯಾಗುವ–ಆಗದ ಪ್ಲ್ಯಾಸ್ಟಿಕ್ ಎಂದು ಬೇರ್ಪಡಿಸಿ, ಶೇಖರಿಸಿ ಕೊಳ್ತಿಗೆಯ ಗ್ರಾಮ ಪಂಚಾಯಿತಿ ಕಚೇರಿಗೆ ತಲುಪಿಸುವ ಕೆಲಸ ಮಾಡಿದರು. ಊರಿನ ಜನ ಎಲ್ಲೆಲ್ಲೋ ಪ್ಲಾಸ್ಟಿಕ್ ಕಸ ಹಾಕುವ ಬದಲು ತನ್ನ ಅಂಗಡಿಯ ಬಳಿಯೇ ಹಾಕಲಿ ಎಂದು ಕಸ ಸಂಗ್ರಹಣಾ ತೊಟ್ಟಿಗಳನ್ನು ನಿರ್ಮಿಸಿದ್ದಾರೆ.

**5**

ಬೆಂಗಳೂರಿನ 'ಹಸಿರುದಳ'ದ ಸಂಸ್ಥಾಪಕಿ ನಳಿನಿ ಶೇಖರ್, ಚಿಂದಿ ಆಯುವವರನ್ನು ಒಗ್ಗೂಡಿಸಿ ಬೆಂಗಳೂರಿನ ಪ್ಲಾಸ್ಟಿಕ್ ಹಾಗೂ ಇತರ ಕಸ ನಿವಾರಿಸುವುದರ ಜೊತೆಗೆ ಆರ್ಥಿಕ–ಸಾಮಾಜಿಕವಾಗಿ ತೀರಾ ಹಿಂದುಳಿದ ಜನಸಮುದಾಯಕ್ಕೆ ಮರ್ಯಾದೆಯ ಬದುಕು ಕಲ್ಪಿಸಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಬೆಂಗಳೂರಿನ ವಿವಿಧ ಭಾಗಗಳಲ್ಲಿ ಕಸ ಸಂಗ್ರಹಿಸಲು 24 ಹಸಿರುದಳ ಘಟಕಗಳನ್ನು ಸ್ಥಾಪಿಸಿರುವುದಲ್ಲದೆ, 540 ಜನರಿಗೆ ನಗರದ 175 ವಸತಿ ಸಮುಚ್ಚಯ ಮತ್ತು ಕಚೇರಿಗಳಲ್ಲಿ ಕೆಲಸ ದೊರಕಿಸಿಕೊಟ್ಟಿದ್ದಾರೆ. 9000 ಜನ ಚಿಂದಿ ಆಯುವವರನ್ನು ಸಂಘಟಿಸಿದ್ದಾರೆ. 2012ರಿಂದ ಕ್ರಿಯಾಶೀಲರಾಗಿರುವ ನಳಿನಿ ಮತ್ತು ಅವರ ತಂಡ FMCG (Fast Moving Consumer Goods), ಕಂಪನಿಗಳಿಂದ ಪ್ರತೀ ವರ್ಷ ನೂರು ಟನ್ ಘನ ತ್ಯಾಜ್ಯ ಸಂಗ್ರಹಿಸಿ ರೀ–ಸೈಕಲ್ ಘಟಕಗಳಿಗೆ ತಲುಪಿಸುತ್ತಾರೆ. ನಳಿನಿ ಶೇಖರ್ ಪ್ರಕಾರ ಪ್ರತೀ ತಿಂಗಳು ಬೆಂಗಳೂರು ನಗರದ ಒಡಲು ಸೇರುತ್ತಿದ್ದ ಪ್ಲಾಸ್ಟಿಕ್ ಕಸದ ಪ್ರಮಾಣ ತಿಂಗಳಿಗೆ 2 ಟನ್‌ನಿಂದ 500 ಕೆ.ಜಿ.ಗಿಳಿದಿದೆ.

**6**

ದಕ್ಷಿಣ ದೆಹಲಿಯ ಪೋಂ–ಪೋಂ (Pom–Pom) ಎಂಬ ಇಂಟರ್‌ನೆಟ್ ವೇದಿಕೆಯು 'ಟ್ರ್ಯಾಶ್ ಟು ಕ್ಯಾಶ್' ಎಂಬ ಘೋಷವಾಕ್ಯದೊಂದಿಗೆ ನಗರಗಳ ಘನ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಕೆಲಸವನ್ನು ಕಳೆದೆರಡು ವರ್ಷಗಳಿಂದ ಮಾಡುತ್ತಿದೆ. ಸಂಸ್ಥೆಯು ನಿಮ್ಮ ಬಳಿಯಿಂದ ಪಡೆದ ರೀ–ಸೈಕಲ್ ಮಾಡಬಹುದಾದ ಕಸಕ್ಕೆ ಹಣವನ್ನೂ ನೇರವಾಗಿ ನಿಮಗೇ ನೀಡುತ್ತದೆ.

**7**

2013ರಲ್ಲಿ ಪ್ರಾರಂಭವಾದ ನವದೆಹಲಿಯ 'ಕರ್ಮಾ ರೀ ಸೈಕಲಿಂಗ್' ಸಂಸ್ಥೆ, ಬಳಸಿ ಬಿಸಾಡುವ ಎಲೆಕ್ಟಾನಿಕ್ ತ್ಯಾಜ್ಯವನ್ನು ರೀ ಸೈಕಲ್ ಮಾಡುತ್ತದೆ. ಭಾರತದಲ್ಲಿ ಮೊಬೈಲ್ ಮತ್ತು ಇತರ 950 ಎಲೆಕ್ಟ್ರಾನಿಕ್ ಉಪಕರಣಗಳು ನಿತ್ಯದ ಬಳಕೆಯಲ್ಲಿದ್ದು, ನಿಷ್ಕ್ರಿಯಗೊಂಡ ಅವುಗಳನ್ನು ನಮ್ಮಿಂದ ಖರೀದಿಸಿ ರೀಸೈಕಲ್ ಮಾಡಿ ಬೇರೆಯವರಿಗೆ ಕಡಿಮೆ ಬೆಲೆಯಲ್ಲಿ ಮಾರಾಟಮಾಡುತ್ತದೆ.

**8**

ನೋಮೋರ್ ಬಟ್ಸ್, ಎಂಬ ನೋಯ್ಡಾ ಮೂಲದ ಸಂಸ್ಥೆಯು ಜನರು ಸೇದಿ ಬಿಸಾಕುವ ಸಿಗರೇಟ್ ತುಂಡುಗಳನ್ನು ಸಂಗ್ರಹಿಸಿ ರೀಸೈಕಲ್ ಮಾಡುವ ಕೆಲಸಮಾಡುತ್ತಿದೆ. ಪ್ರತಿ ಕೆ.ಜಿ.ಗೆ ₹ 800 ನೀಡುತ್ತದೆ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in

